## ಈ ಲೇಖನದ ವಿಷಯಾನುಕ್ರಮಣಿಕೆ


ಈ ಬಾರಿ ಅತಿರಿಕ್ತೋಪವಾಸವಿಲ್ಲ 2

ನನ್ನ ಸ್ಪಷ್ಟ ನಿಲುವು 2

ಅತಿರಿಕ್ತೋಪವಾಸ ಎಂದರೇನು 5

ಅತಿರಿಕ್ತೋಪವಾಸವನ್ನು ನಿರ್ಧರಿಸುವ ಕ್ರಮ 8

ಈ ಬಾರಿಯ ತಿಥಿಗಳು 10

ವಿವಾದ ಎಲ್ಲಿದೆ 11

ಮತ್ತೊಂದು ಪ್ರಮಾಣ 17

ನಮ್ಮ ಸಂಪ್ರದಾಯ, ನಾವು ಹೀಗೇ ಮಾಡುತ್ತೇವೆ ಎನ್ನುವವರಿಗೆ ಉತ್ತರ 19

ನಿರ್ಣಯ 22

# ವಿಶ್ವನಂದಿನಿ ಲೇಖನಮಾಲೆ — 215

## ಈ ಬಾರಿ ಅತಿರಿಕ್ತೋಪವಾಸವಿಲ್ಲ

ದುರ್ಮುಖ ಸಂವತ್ಸರದ ಮಾರ್ಗಶೀರ್ಷ ಕೃಷ್ಣಪಕ್ಷದಲ್ಲಿ ಅತಿರಿಕ್ತ ಉಪವಾಸವಿದೆ[1] ಎಂದು ಕೆಲವರು ತಿಳಿದಿದ್ದಾರೆ. ವಸ್ತುಸ್ಥಿತಿಯಲ್ಲಿ ಅತಿರಿಕ್ತೋಪವಾಸ ಇಲ್ಲ. ಅದರ ಕುರಿತ ಚರ್ಚೆ ಇಲ್ಲಿದೆ.

## ನನ್ನ ಸ್ಪಷ್ಟ ನಿಲುವು

ಸಮಸ್ತ ಮಾಧ್ವರಿಗೂ ಒಂದೇ ರೀತಿಯ ಏಕಾದಶಿ ಆಗಲು ಸರ್ವಥಾ ಸಾಧ್ಯವಿದೆ. ಗಣಿತದ ಲೆಕ್ಕದಲ್ಲಿ ಕೆಲವು ತಪ್ಪುಗಳನ್ನು ಕೆಲವರು ಮಾಡುವದರಿಂದ ಭೇದ ಉಂಟಾಗುತ್ತಿದೆ. ಲೆಕ್ಕದಲ್ಲಿನ ಈ ತಪ್ಪುಗಳನ್ನು ಹೋಗಲಾಡಿಸಬೇಕಾಗಿದೆ. ಆಗ ಮಾತ್ರ ಒಂದೇ ರೀತಿಯ ಏಕಾದಶಿ ಬರಲು ಸಾಧ್ಯ.

[1] December 25th 2016

ಕೇವಲ ತತ್ವನಿಷ್ಠನಾಗಿ, ಸಮಸ್ತ ಮಾಧ್ವರಿಗೂ ಒಂದೇ ಏಕಾದಶಿ ಆಗಬೇಕೆಂಬ ಸದಾಶೆಯಿಂದ ಇದರಲ್ಲಿ ಪ್ರವೃತ್ತನಾಗಿದ್ದೇನೆ.

ಅತಿರಿಕ್ತ ಏಕಾದಶಿಯ ವಿಷಯದಲ್ಲಿ ಕೆಲವರ ಲೆಕ್ಕಾಚಾರ ಪೂರ್ಣವಾಗಿ ತಪ್ಪಿದೆ. ಇದೊಂದೇ ಅತಿರಿಕ್ತ ಉಪವಾಸವಲ್ಲ, ಅವರು ಒಟ್ಟಾರೆ ಅತಿರಿಕ್ತ ಉಪವಾಸವನ್ನು ನಿರ್ಣಯಿಸುವಲ್ಲಿ ತಪ್ಪು ಮಾಡುತ್ತಾರೆ.

ಯಾರು ತಪ್ಪು ಮಾಡಿದ್ದಾರೆಯೋ ಅವರನ್ನು ನೀವು ವೈಯಕ್ತಿಕವಾಗಿ ಭೇಟಿಯಾಗಿ ಹೇಳಬಹುದಲ್ಲ ಎಂದು ಕೇಳಬಹುದು. ಅದಕ್ಕೆ ಎರಡು ಉತ್ತರಗಳಿವೆ.

ಹಿಂದೊಮ್ಮೆ ದಶಮೀವೇಧದ ವಿಷಯದಲ್ಲಿ ಒಂದು ಪಂಚಾಂಗದಲ್ಲಿ ತಪ್ಪಾಗಿತ್ತು. ನಾನು ಆ ಮಠದ ಹಿರಿಯ ವಿದ್ವಾಂಸರೊಬ್ಬರನ್ನು ಸಂಪರ್ಕಿಸಿದ್ದೆ. ಇಡಿಯ ದಿನ ಫೋನಿನಲ್ಲಿ ಚರ್ಚಿಸಿ, ತಪ್ಪಾಗಿದೆ ಎನ್ನುವದನ್ನು ಪ್ರತಿಪಾದಿಸಿದ್ದೆ. "ಈಗ ಮುದ್ರಣವಾಗಿಬಿಟ್ಟಿರುವದರಿಂದ ಈಗ ಜನರ

ಮುಂದೆ ಏನೂ ಹೇಳುವದು ಬೇಡ, ಮತ್ತೊಮ್ಮೆ ಚರ್ಚಿಸೋಣ” ಎಂದರು. ಆ ಸಂವತ್ಸರವೇ ಮುಗಿದು ಹೋಯಿತು. ಚರ್ಚೆಯ ವಿಷಯವೇ ಇಲ್ಲ.

ಎರಡನೆಯ ಉತ್ತರ — ಮಾಧ್ವರು ಅತೀ ನಿಷ್ಠೆಯಿಂದ ಆಚರಿಸುವ ವ್ರತ ಏಕಾದಶೀವ್ರತ. ಸರ್ವೋತ್ತಮವ್ರತ. ಹೀಗಾಗಿ ಅದರ ಕುರಿತು ಶುದ್ಧ ವಿಷಯವನ್ನು ನೀಡಬೇಕಾದ್ದು ನನ್ನ ಕರ್ತವ್ಯ. ಅದಕ್ಕಾಗಿ ಇದನ್ನು ಪ್ರಕಟಿಸುತ್ತಿದ್ದೇನೆ.

## ಅತಿರಿಕ್ತೋಪವಾಸ ಎಂದರೇನು

ಏಕಾದಶಿಯಂದು ಉಪವಾಸ, ದ್ವಾದಶಿಯಂದು ಪಾರಣೆ ಎನ್ನುವದು ಸಾಮಾನ್ಯವಾದ ನಿಯಮ.

ಇಂದು ಏಕಾದಶೀ, ನಾಳೆ ದ್ವಾದಶೀ, ನಾಡಿದ್ದೂ ಸಹ ಸೂರ್ಯೋದಯದ ನಂತರ ದ್ವಾದಶಿ ಇದ್ದರೆ ನಾಳೆ ದ್ವಾದಶಿಯಂದೂ ಉಪವಾಸ ಮಾಡಬೇಕು. ಇದನ್ನು ಅತಿರಿಕ್ತೋಪವಾಸ ಎಂದು ಹೇಳುತ್ತಾರೆ. ಈ ವಿಷಯವನ್ನು ಶ್ರೀಮದಾಚಾರ್ಯರು ಶ್ರೀಕೃಷ್ಣಾಮೃತಮಹಾರ್ಣವದಲ್ಲಿ ತಿಳಿಸಿದ್ದಾರೆ —

**ಕಲಾ ವಾ ಘಟಿಕಾ ವಾಪಿ**
**ಪರತೋ ದ್ವಾದಶೀ ಯದಿ**
**ದ್ವಾದಶ ದ್ವಾದಶೀರ್ಹಂತಿ**
**ಪೂರ್ವೇದ್ಯುಃ ಪಾರಣೇ ಕೃತೇ**

**ಪರತಃ** ಮಾರನೆಯ ದಿವಸ ಸೂರ್ಯೋದಯದ ನಂತರ

**ಘಟಿಕಾ ವಾ, ಕಲಾ ವಾ ಯದಿ ದ್ವಾದಶೀ ವಿದ್ಯತೇ** ಒಂದು ಗಳಿಗೆಯಾಗಲೀ  ಒಂದು ಕಲೆಯಾಗಲೀ ದ್ವಾದಶೀ ಇದ್ದರೆ[2]

**ಪೂರ್ವೇದ್ಯುಃ ಪಾರಣೇ ಕೃತೇ** ಮೊದಲ ದ್ವಾದಶಿಯಂದು ಪಾರಣೆ ಮಾಡಿದಲ್ಲಿ

**ದ್ವಾದಶ ದ್ವಾದಶೀರ್ಹಂತಿ** ನಾವು ಹಿಂದೆ ಮಾಡಿದ ಹನ್ನೆರಡು ದ್ವಾದಶಿಗಳ ಪುಣ್ಯ ವಿನಾಶವಾಗುತ್ತದೆ.

ಹೀಗೆ ಎರಡು ಸೂರ್ಯೋದಯದ ಕಾಲದಲ್ಲಿ ದ್ವಾದಶಿ ಇರುವದರಿಂದ ಇದನ್ನು ಅತಿರಿಕ್ತ ದ್ವಾದಶೀ ಎನ್ನುತ್ತಾರೆ[3].

ಏಕಾದಶಿಯಂದು ಉಪವಾಸ ಮಾಡಿರುತ್ತೇವೆ. ದ್ವಾದಶೀ ಅತಿರಿಕ್ತವಾದಾಗ ಮೊದಲನೆಯ

---

[2] ಗಳಿಗೆ ಎಂದರೆ 24 ನಿಮಿಷಗಳು. ಕಲಾ ಎಂದರೆ ತಾಮ್ರಪರ್ಣೀ ಆಚಾರ್ಯರ ಪ್ರಕಾರ ಕಲಾ ಎಂದರೆ  24 ಸೆಕೆಂಡುಗಳು. ಜ್ಯೋತಿಃಶಾಸ್ತ್ರದ ಪ್ರಕಾರ 48 ಸೆಕೆಂಡುಗಳು.  ಅಮರಕೋಶದ ಪ್ರಕಾರ ಕೇವಲ 8 ಸೆಕೆಂಡುಗಳು.

[3] ಅತಿರಿಕ್ತ ದ್ವಾದಶೀ ಹೆಚ್ಚಾಗಿರುವ ದ್ವಾದಶೀ ಎನ್ನುವದು ಒಂದರ್ಥ. ನವಮಿಯಿಂದ ಹಿಡಿದು ವೃದ್ಧವಾಗಿರುವ ದ್ವಾದಶೀ ತಿಥಿ ಎಂಬ ಮತ್ತೊಂದು ಅರ್ಥವನ್ನೂ ಕೋನೇರಿ ಆಚಾರ್ಯರು ಹೇಳಿದ್ದಾರೆ.

ದ್ವಾದಶಿಯಂದೂ ಉಪವಾಸವನ್ನು ಮಾಡಬೇಕು. ಹೀಗಾಗಿ ಇದು ಅತಿರಿಕ್ತೋಪವಾಸ ಎಂದು ಕರೆಸಿಕೊಳ್ಳುತ್ತದೆ.

ಆ ಅತಿರಿಕ್ತದ್ವಾದಶೀ ಎಂಬ ಶಬ್ದವನ್ನು ಶ್ರೀಮದಾಚಾರ್ಯರೇ ಬಳಸಿದ್ದಾರೆ —

**ಅತಿರಿಕ್ತಾ ದ್ವಾದಶೀ ಚೇದ್**
**ಯಸ್ತಾಂ ನೋಪೋಷಯೇದ್ ಯದಿ ।**
**ದ್ವಾದಶ ದ್ವಾದಶೀರ್ಹಂತಿ**
**ದ್ವಾದಶೀ ಚಾತಿಲಂಘಿತಾ ॥**

ಎಂದು.

## ಅತಿರಿಕ್ತೋಪವಾಸವನ್ನು ನಿರ್ಧರಿಸುವ ಕ್ರಮ

ತಿಥಿಗಳನ್ನು ಲೆಕ್ಕ ಹಾಕಲು ಸದ್ಯಕ್ಕೆ ಸೂರ್ಯಸಿದ್ಧಾಂತ ಮತ್ತು ದೃಗ್ಗಣಿತ ಎರಡು ಗಣಿತ ಪದ್ಧತಿಗಳು ಪ್ರಧಾನವಾಗಿ ಬಳಕೆಯಲ್ಲಿವೆ[4]. ಇವುಗಳಲ್ಲಿ ದೃಗ್ಗಣಿತವನ್ನು ಮುಹೂರ್ತ, ಗ್ರಹಣ, ಸಂಕ್ರಾಂತಿ, ಜನನ ಮರಣಗಳ ಸಮಯವನ್ನು ನಿರ್ಧರಿಸಲು ಬಳಸಬೇಕು.

ವ್ರತಾದಿಗಳನ್ನು ಅನುಷ್ಠಾನ ಮಾಡಲು ಸೂರ್ಯಸಿದ್ಧಾಂತವನ್ನು ಬಳಸಬೇಕು.

ಆದರೆ, ವೈಷ್ಣವವ್ರತಗಳನ್ನು ಅನುಷ್ಠಾನ ಮಾಡಲು ಅಂದರೆ, ಏಕಾದಶೀ, ವಿಷ್ಣುಪಂಚಕ, ಕೃಷ್ಣಾಷ್ಟಮೀ ಮುಂತಾದ ವ್ರತಗಳನ್ನು ನಿರ್ಧರಿಸಲು ನಾವು ಸೂರ್ಯಸಿದ್ಧಾಂತವನ್ನು ಬಳಸುವದಿಲ್ಲ.

---

[4] ಶ್ರೀಮದಾಚಾರ್ಯರ ಆದೇಶದಂತೆ ಶ್ರೀ ತ್ರಿವಿಕ್ರಮಪಂಡಿತಾಚಾರ್ಯರು ರಚನೆ ಮಾಡಿರುವ ತಿಥಿನಿರ್ಣಯ ಎಂಬ ಗ್ರಂಥವನ್ನು ಆಧರಿಸಿ ಗಣಿತವನ್ನು ನಿರ್ಧರಿಸಿದರೆ ಏಕಾದಶಿಯ ಕುರಿತು ಇರುವ ಸಮಸ್ಯೆಗಳೆಲ್ಲ ಪರಿಹಾರವಾಗುತ್ತವೆ. ತಿಥಿನಿರ್ಣಯದ ಗಣಿತ ನಮ್ಮಲ್ಲಿ ಶೀಘ್ರ ಅನುಷ್ಠಾನಕ್ಕೆ ಬರಬೇಕು.

ಆರ್ಯಮಾನಗಣಿತವನ್ನು ಬಳಸುತ್ತೇವೆ. ಇದನ್ನು ಎಲ್ಲ ಮಾಧ್ವರೂ ಒಪ್ಪಿದ್ದಾರೆ[5].

ಸೂರ್ಯಸಿದ್ಧಾಂತವನ್ನು ಆರ್ಯಮಾನದ ರೀತಿಯಲ್ಲಿ ಬದಲಾಯಿಸಿಕೊಳ್ಳುವ ಪದ್ಧತಿಯನ್ನೂ ಹಿಂದಿನವರು ಹೇಳಿಕೊಟ್ಟಿದ್ದಾರೆ.

ಹಾಗೆಯೇ, ಆರ್ಯಮಾನದ ರೀತಿಯಲ್ಲಿ ತಿಥಿಗಳನ್ನು ಲೆಕ್ಕ ಹಾಕಲು ಅನೇಕ ಗ್ರಂಥಗಳೂ ಉಪಲಬ್ಧವಿವೆ.

ಹೀಗಾಗಿ ಆರ್ಯಮಾನದ ಗಣಿತದ ಲೆಕ್ಕದ ಪ್ರಕಾರ ಮಾರನೆಯ ದಿವಸ ಸೂರ್ಯೋದಯದ ನಂತರವೂ ದ್ವಾದಶೀ ಇದ್ದಲ್ಲಿ ಮೊದಲ ದ್ವಾದಶಿಯಂದು ಅತಿರಿಕ್ತೋಪವಾಸ ಉಂಟಾಗುತ್ತದೆ.

---

[5] ಇತ್ತೀಚಿಗೆ ಮಾತ್ರ ಕೆಲವರು ದೃಗ್ಗಣಿತದ ರೀತಿಯಲ್ಲಿ ತಿಥಿಗಳನ್ನು ಅನುಷ್ಠಾನ ಮಾಡಲು ಹೊರಟಿದ್ದಾರೆ. ಆದರೆ ಅದು ಶ್ರೀಮದಾಚಾರ್ಯರ ನಿರ್ಣಯಗಳಿಗೆ ಮತ್ತು ಶ್ರೀ ವಾದಿರಾಜರ ವಚನಗಳಿಗೆ ಸ್ಪಷ್ಟವಾಗಿ ವಿರುದ್ಧವಾದದ್ದು.

## ಈ ಬಾರಿಯ ತಿಥಿಗಳು

ಈ ಬಾರಿ ಡಿಸೆಂಬರಿನ 24ನೆಯ ತಾರೀಕು ಏಕಾದಶಿ ಉಪವಾಸ. ಇದರಲ್ಲಿ ಯಾವ ವಿವಾದವೂ ಇಲ್ಲ.

ಡಿಸೆಂಬರಿನ 25ನೆಯ ತಾರೀಕು ದ್ವಾದಶೀ. 26ನೆಯ ತಾರೀಕು ಸೂರ್ಯೋದಯದ ಸಮಯಕ್ಕೆ ಆರ್ಯಮಾನ ಗಣಿತದ ಪ್ರಕಾರ ದ್ವಾದಶೀ ಇಲ್ಲವಾದ್ದರಿಂದ 25ನೆಯ ತಾರೀಕು ಅತಿರಿಕ್ತ ಉಪವಾಸವಿಲ್ಲ.

ದ್ವಾದಶಿಯಂದು ಪಾರಣೆ ಮಾಡಬೇಕಾದರೆ ದ್ವಾದಶೀ ತಿಥಿಯನ್ನು ನಾಲ್ಕು ಭಾಗ ಮಾಡಿ ಅದರ ಮೊದಲ ಭಾಗ ಮುಗಿದ ಬಳಿಕ ಪಾರಣೆ ಮಾಡಬೇಕು. ಇದು ಎಲ್ಲರೂ ಒಪ್ಪಿರುವ ವಿಷಯ.

25ನೇಯ ತಾರೀಕು ಭಾನುವಾರ ದ್ವಾದಶಿಯ ಮೊದಲನೆಯ ಭಾಗ ಸುಮಾರು 10-15 ಕ್ಕೆ ಮುಗಿಯುತ್ತದೆಯಾದ್ದರಿಂದ  ಆ ನಂತರ ಪಾರಣೆಯನ್ನು ಮಾಡಬೇಕು.

## ವಿವಾದ ಎಲ್ಲಿದೆ

ಹಾಗಾದರೆ, ಕೆಲವರು ಅತಿರಿಕ್ತ ಉಪವಾಸವನ್ನು ಯಾಕಾಗಿ ಮಾಡುತ್ತಿದ್ದಾರೆ?

ಅತಿರಿಕ್ತ ಉಪವಾಸವನ್ನು ಮಾಡುತ್ತಿರುವವರು ದ್ವಾದಶಿಯನ್ನು ಕೇವಲ ಆರ್ಯಮಾನದಿಂದ ಲೆಕ್ಕ ಹಾಕದೆ ಅದಕ್ಕೆ ಲಿಪ್ತಿಗಳನ್ನೂ[6] ಸೇರಿಸಿ ಲೆಕ್ಕ ಹಾಕುತ್ತಿದ್ದಾರೆ.

ಈ ಲಿಪ್ತಿಗಳನ್ನು ಸೇರಿಸಬೇಕು ಎಂದು ಹೇಳಿರುವದು ಶ್ರೀ ತ್ರಿವಿಕ್ರಮಪಂಡಿತಾಚಾರ್ಯರು. **ಆದರೆ ಅವರು ಲಿಪ್ತಿಗಳನ್ನು ಸೇರಿಸಲು ಹೇಳಿರುವದು ದಶಮೀ ವೇಧ ನಿರ್ಣಯಕ್ಕೇ ಹೊರತು ದ್ವಾದಶೀ ನಿರ್ಣಯಕ್ಕೆ ಅಲ್ಲ.**

ಶ್ರೀ ತ್ರಿವಿಕ್ರಮಪಂಡಿತಾಚಾರ್ಯರ ವಚನಗಳು ಹೀಗಿವೆ —

[6] ಇಲ್ಲಿ ಲಿಪ್ತಿ ಎನ್ನುವ ಶಬ್ದದ ಬಳಕೆಯೂ ತಪ್ಪು. ಪಂಡಿತಾಚಾರ್ಯರು ಲಿಪ್ತಿಯನ್ನು ಲಿಪ್ತಿ ಎಂದು ಕರೆದಿದ್ದಾರೆ. ಇವರು ಲಿಪ್ತಿಯನ್ನು ಗಳಿಗೆ ಪಳಗಳಿಗೆ ಬದಲಾಯಿಸಿ ಮತ್ತೆ ಲಿಪ್ತಿ ಎಂದೇ ಕರೆಯುತ್ತಿದ್ದಾರೆ.

**ಏಕಾತಿದ್ವಾದಶೀವೃದ್ಧೌ**
**ನೋ ಚೇದ್ ವೃದ್ಧೌ ತು ಷೋಡಶ**
**ದ್ವ್ಯೈಕಲಿಪ್ತೀ ಸಮಹ್ರಾಸೇ**
**ಚತುಷ್ಕಾದುತ್ತರಂ ತ್ರಿದಮ್**

**ಅತಿವೃದ್ಧಾವಷ್ಟಯುಗಂ**
**ವೃದ್ಧಾವಷ್ಟ ಸಮೇ ಚತುಃ**
**ದ್ವ್ಯೈಕಲಿಪ್ತೀ ಸಮಹ್ರಾಸೇ**
**ಚತುಷ್ಕಾದುತ್ತರಂ ತ್ರಿದಮ್**

ತಿಥಿಗಳಲ್ಲಿ ಅತಿವೃದ್ಧಿ, ವೃದ್ಧಿ, ಸಮ, ಕ್ಷಯ, ಅತಿಕ್ಷಯ ಎಂಬೆಲ್ಲ ವಿಭಾಗಗಳಿವೆ.

ಅತಿವೃದ್ಧಿ ಇರುವ ತಿಥಿ ಇದ್ದಾಗ 16 ಲಿಪ್ತಿಗಳನ್ನು[7] ಅಂದರೆ ಒಂದು ಗಳಿಗೆ ಇಪ್ಪತ್ತು ಪಳಗಳನ್ನು ಸೇರಿಸಿ ದಶಮೀವೇಧ ನಿರ್ಣಯ ಮಾಡಬೇಕು ಎನ್ನುವದು ಶ್ರೀ ತ್ರಿವಿಕ್ರಮಪಂಡಿತಾಚಾರ್ಯರ ನಿರ್ಣಯ.

---

[7] ಐದು ವಿಘಳಿಗೆಗಳು ಒಂದು ಲಿಪ್ತಿಯಾಗುತ್ತದೆ. ಎರಡು ನಿಮಿಷಗಳು. ಈ ಬಾರಿಯ ತಿಥಿ ಅತಿವೃದ್ಧಿಯ ಪಕ್ಷಕ್ಕೆ ಸೇರುತ್ತದೆಯಾದ್ದರಿಂದ ಅದನ್ನು ಮಾತ್ರ ಉಲ್ಲೇಖಿಸಿದ್ದೇನೆ.

ಆದರೆ ತಪ್ಪಾಗಿರುವದು ಎಲ್ಲಿ ಎಂದರೆ, ಈ ವಾಕ್ಯ ಕೇವಲ ದಶಮೀವೇಧನಿರ್ಣಯಕ್ಕಾಗಿ ಹೊರಟಿರುವ ವಾಕ್ಯ. ಇಲ್ಲಿ ಹೇಳಿರುವ ಲಿಪ್ತಿಗಳನ್ನು ಅತಿರಿಕ್ತ ಏಕಾದಶಿಗೂ ಬಳಸಿಕೊಂಡಿರುವದು ತಪ್ಪು.

ಪಂಡಿತಾಚಾರ್ಯರೇ ಸ್ಪಷ್ಟವಾಗಿ **ಚತುಷ್ಕಾದುತ್ತರಂ ತ್ವಿದಮ್** ಎಂದು ಹೇಳಿದ್ದಾರೆ. ಚತುಷ್ಕ ಎಂದರೆ ಅರುಣೋದಯದ ನಾಲ್ಕು ಗಳಿಗೆಗಳು. ಉತ್ತರ ಎಂದರೆ ಅದಕ್ಕಿಂತ ಮುಂಚೆ ಎಂದರ್ಥ.

ಏಕಾದಶಿ ಇರುವ ದಿವಸದ ಅರುಣೋದಯಕ್ಕಿಂತ ಒಂದು ಗಳಿಗೆ 20 ಪಳ ಮುಂಚೆ ದಶಮೀ ಇದ್ದಲ್ಲಿ ಏಕಾದಶೀ ವಿದ್ಧವಾಗಿ ಉಪವಾಸಕ್ಕೆ ಅನರ್ಹವಾಗುತ್ತದೆ ಎಂದರ್ಥ.

ಶ್ರೀತ್ರಿವಿಕ್ರಮಪಂಡಿತಾಚಾರ್ಯರ ಈ ಮಹತ್ತ್ವದ ಎರಡು ಶ್ಲೋಕಗಳಿಗೆ ವ್ಯಾಖ್ಯಾನ ಮಾಡಲು ಏಕಾದಶೀ ನಿರ್ಣಯ ಎಂಬ ಗ್ರಂಥವನ್ನು ರಚಿಸಿರುವ ಶ್ರೀ ವಾದಿರಾಜರು ಸ್ಪಷ್ಟವಾಗಿ ತಿಳಿಸುತ್ತಾರೆ —

**ಚತುಷ್ಕಾನ್ಮೂಲವಾಕ್ಯೋಕ್ತ-**
**ಘಟಿಕಾನಾಂ ಚತುಷ್ಟಯಾತ್**
**ಉತ್ತರಂ ಪೂರ್ವಕಾಲೇ ತು**
**ಜ್ಞೇಯೇತ್ಥಂ ದಶಮೀ ತಿಥಿಃ**

ಎಂದು.

**ಚತುಷ್ಕಾದುತ್ತರಂ** ಎಂಬಲ್ಲಿನ ಉತ್ತರ ಎನ್ನುವ ಶಬ್ದಕ್ಕೆ ಪೂರ್ವಕಾಲ ಎಂದರ್ಥ.

ಇತ್ಥಂ ಈ ಕ್ರಮದಲ್ಲಿ ದಶಮೀ ತಿಥಿಃ ದಶಮಿಯನ್ನು ನಿರ್ಣಯಿಸಬೇಕು. ದಶಮಿಯ ವೇಧ ಏಕಾದಶಿಗೆ ಇದೆಯೇ ಇಲ್ಲವೇ ಎನ್ನುವದನ್ನು ನಿರ್ಣಯಿಸಬೇಕು ಎಂದು ಈ ಶ್ಲೋಕಗಳು ಕೇವಲ ದಶಮೀವೇಧನಿರ್ಣಯಕ್ಕಾಗಿ ಹೊರಟದ್ದು ಎಂದು ತಿಳಿಸಿದ್ದಾರೆ.

ಎಲ್ಲದರ್ಕ್ಕಿಂತ ಮುಖ್ಯವಾಗಿ ಅತಿರಿಕ್ತ ಏಕಾದಶಿಯ ನಿರ್ಣಯ ಮಾಡುವ ಸಂದರ್ಭದಲ್ಲಿ ಅರುಣೋದಯದ ಪ್ರಸಕ್ತಿಯೇ ಇಲ್ಲ. ಸೂರ್ಯೋದಯದ ಪ್ರಸಕ್ತಿ ಇದೆ. ಸೂರ್ಯೋದಯದ ನಂತರ ದ್ವಾದಶೀ ಇದ್ದಲ್ಲಿ

ಹಿಂದಿನ ದಿವಸದ ದ್ವಾದಶಿಯಂದೂ ಉಪವಾಸ ಮಾಡಬೇಕು ಎಂದು.

ಹೀಗಾಗಿ ಪಂಡಿತಾಚಾರ್ಯರು ಹೇಳುತ್ತಿರುವ ಲಿಪ್ತಿಗಳಿಗೂ ಅತಿರಿಕ್ತ ಏಕಾದಶಿಗೂ ಸಂಬಂಧವೇ ಇಲ್ಲ.

ಅದ್ದರಿಂದ ಆ ಲಿಪ್ತಿಯನ್ನೂ ಸೇರಿಸಿ ಲೆಕ್ಕ ಹಾಕುವ ಆವಶ್ಯಕತೆಯೇ ಇಲ್ಲವಾದ್ದರಿಂದ[8] ಅತಿರಿಕ್ತ ಉಪವಾಸವನ್ನು ಕೇವಲ ಆರ್ಯಮಾನದಿಂದ ಲೆಕ್ಕವನ್ನು ಹಾಕಿ ನಿರ್ಣಯಿಸಬೇಕು.

ಅತಿರಿಕ್ತೋಪವಾಸವನ್ನು ಮಾಡಬೇಕಾದರೆ ಸೂರ್ಯೋದಯದ ನಂತರ ಕನಿಷ್ಠ ಒಂದೂವರೆ ನಿಮಿಷಗಳ ಕಾಲ ದ್ವಾದಶಿ ಇರಲೇಬೇಕು.

---

[8] ಶ್ರೀ ತ್ರಿವಿಕ್ರಮಪಂಡಿತಾಚಾರ್ಯರ ವಚನದಲ್ಲಿ ಷಣ್ ನ್ಯೂನಂ ಹರಿವಾಸರಃ ಎಂಬ ಪಾಠಾಂತರವಿದೆ ಎಂದು ಹೇಳಿ ಉಪೇಂದ್ರಭಟ್ಟರು "ಕೇಚಿತ್ ಪಕ್ಷ"ವನ್ನು ಉಲ್ಲೇಖಿಸುತ್ತಾರೆ. ಆದರೆ, ಷಣ್ ನ್ಯೂನಂ ಹರಿವಾಸರಃ ಎಂಬ ಪಾಠಗಳಲ್ಲಿ ಅಪರಿಹಾರ್ಯ ಸಮಸ್ಯೆ ಇದೆ. ಮತ್ತು ಉಳಿದ ಯಾವ ವ್ಯಾಖ್ಯಾನಕಾರರೂ ಆ ರೀತಿಯ ಪಾಠಾಂತರವನ್ನು ಉಲ್ಲೇಖಿಸಿಲ್ಲ. ಶ್ರೀ ವಾದಿರಾಜರೂ ಉಲ್ಲೇಖಿಸಿಲ್ಲ. ಎಲ್ಲದಕ್ಕಿಂತ ಮುಖ್ಯವಾಗಿ ಅತಿರಿಕ್ತಉಪವಾಸಕ್ಕೂ  ಈ ಲಿಪ್ತಿಗಳಿಗೂ ಸಂಬಂಧವೇ ಇಲ್ಲ.

ಆದರೆ ಈ ಬಾರಿ ಆರ್ಯಮಾನದ ಪ್ರಕಾರ[9] 59:48 ಕ್ಕೆ ದ್ವಾದಶೀ ಮುಗಿಯುತ್ತದೆಯಾದ್ದರಿಂದ, ಅಂದರೆ ಸೂರ್ಯೋದಯಕ್ಕಿಂತ ನಾಲ್ಕು ನಿಮಿಷ ನಲವತ್ತೆಂಟು ಸೆಕೆಂಡುಗಳ ಮುಂಚೆಯೇ ದ್ವಾದಶಿ ಮುಗಿಯುವದರಿಂದ ಸರ್ವಥಾ ಅತಿರಿಕ್ತೋಪವಾಸವಿಲ್ಲ.

ಇನ್ನು ಯಾವ ಊರಿನಲ್ಲಿ ಸೂರ್ಯಸಿದ್ಧಾಂತದ ಪ್ರಕಾರ 58 ಗಳಿಗೆ ದ್ವಾದಶಿಯಿದೆಯೋ, ಆ ಊರಿನಲ್ಲಿ ಆರ್ಯಮಾನದ ಪ್ರಕಾರ ಸೂರ್ಯೋದಯದ ನಂತರವೂ ದ್ವಾದಶೀ ತಿಥಿಯಿರುತ್ತದೆ. ಹೀಗಾಗಿ ಅವರು ಅತಿರಿಕ್ತೋಪವಾಸವನ್ನು ಮಾಡಬೇಕು.

---

[9] ವಿಜಾಪುರದಲ್ಲಿ ಸೂರ್ಯಸಿದ್ಧಾಂತದ ಪ್ರಕಾರ 57.27 ಗಳಿಗೆ ದ್ವಾದಶೀ ಇದೆ. ಅದನ್ನು ಆರ್ಯಮಾನವಾಗಿ ಪರಿವರ್ತಿಸಲು, ಅತಿವೃದ್ಧಿಯ ಪಕ್ಷವಾದ್ದರಿಂದ 2.21 ಅನ್ನು ಸೇರಿಸಬೇಕು. ಸೇರಿಸಿದಾಗ 59:48 ಆಗುತ್ತದೆ. ಲಿಪ್ತಿಗಳನ್ನು ಸೇರಿಸಲು ಪ್ರಮಾಣವಿಲ್ಲ, ಪಂಡಿತಾಚಾರ್ಯರ ವಚನ ಕೇವಲ ದಶಮೀವೇಧನಿರ್ಣಯಕ್ಕಾಗಿ ಪ್ರವೃತ್ತವಾಗಿರುವದರಿಂದ ಆ ವಾಕ್ಯಕ್ಕೂ ಅತಿರಿಕ್ತೋಪವಾಸಕ್ಕೂ ಸಂಬಂಧವಿಲ್ಲ.

## ಮತ್ತೊಂದು ಪ್ರಮಾಣ

ಅತಿರಿಕ್ತದ್ವಾದಶಿ ಇದ್ದಾಗ ಸಾಧನದ್ವಾದಶೀ ಬಂದೊದಗೇ ಒದಗುತ್ತದೆ. ಬಹುತೇಕ ಕಲಾಮಾತ್ರಸಾಧನದ್ವಾದಶೀ ಬಂದೊದಗುತ್ತದೆ.

ಈ ಕಲಾಸಾಧನೀಯನ್ನು ನಿರ್ಣಯ ಮಾಡಬೇಕಾದರೆ ಒಂದು ಶ್ಲೋಕವನ್ನು ಪಠಿಸುತ್ತಾರೆ —

**ಅಷ್ಟಪಂಚಾಶದ್-ಘಟಿಕಾ**
**ದ್ವಾದಶೀ ದೃಶ್ಯತೇ ಯದಿ**
**ಆರ್ಯಮಾನೇನೋರ್ವರಿತಾ**
**ಪರತ್ರ ದ್ವಾದಶೀ ತದಾ**
**ಕಲಾಮಾತ್ರೇತಿ ಸಾ ಜ್ಞೇಯಾ**

ಸೂರ್ಯಸಿದ್ಧಾಂತದ ಪ್ರಕಾರ ದ್ವಾದಶೀ ತಿಥಿಯು 58 ಗಳಿಗೆ ಇದ್ದಾಗ ಆರ್ಯಮಾನದ ರೀತಿಯಲ್ಲಿ ಸೂರ್ಯೋದಯದ ನಂತರವೂ ದ್ವಾದಶಿ ಇರುತ್ತದೆ. ಆಗ ಸೂರ್ಯೋದಯದ ನಂತರ ಎಷ್ಟು ಹೊತ್ತು ದ್ವಾದಶಿ ಇರುತ್ತದೆಯೋ ಅಷ್ಟರಲ್ಲಿ ಪಾರಣೆಯನ್ನು ಮಾಡಬೇಕು. ಇದನ್ನು ಕಲಾಮಾತ್ರಸಾಧನೀ ದ್ವಾದಶೀ ಎನ್ನುತ್ತಾರೆ.

ಈ ಪ್ರಮಾಣದಲ್ಲಿಯೂ ಸಹ ಸ್ಪಷ್ಟವಾಗಿ 58 ಗಳಿಗೆಗಳು ಸೂರ್ಯಸಿದ್ಧಾಂತದ ರೀತಿ ಇದ್ದಾಗ ಅದು ಆರ್ಯಮಾನದ ರೀತಿಯಲ್ಲಿ ಸೂರ್ಯೋದಯದ ನಂತರವೂ ಇರುತ್ತದೆ ಎಂದಿದೆ.

ಆದರೆ, ದಶಮೀವೇಧದ ನಿರ್ಣಯಕ್ಕಾಗಿ ಹೇಳಿರುವ ಲಿಪ್ತಿಗಳನ್ನು ಕೂಡಿಸಿದಾಗ ಸೂರ್ಯಸಿದ್ಧಾಂತದ ಪ್ರಕಾರ 56 ಗಳಿಗೆ 19 ಪಳಗಳಿದ್ದರೂ ಸೂರ್ಯೋದಯದ ನಂತರ ದ್ವಾದಶಿ ಬರುತ್ತದೆ.

ಇದರಿಂದಲೂ ನಿರ್ಣಯವಾಗುವ ವಿಷಯ ಲಿಪ್ತಿಗಳನ್ನು ದ್ವಾದಶಿಯ ವಿಷಯದಲ್ಲಿ ಬಳಸುವಂತಿಲ್ಲ ಎಂದು.

## ನಮ್ಮ ಸಂಪ್ರದಾಯ, ನಾವು ಹೀಗೇ ಮಾಡುತ್ತೇವೆ ಎನ್ನುವವರಿಗೆ ಉತ್ತರ

ಇನ್ನು ಇದು ನಮ್ಮ ಸಂಪ್ರದಾಯ, ಅದಕ್ಕಾಗಿ ಹೀಗೆ ಮಾಡುತ್ತೇವೆ ಎಂಬ ಉತ್ತರಕ್ಕೆ ಪ್ರತ್ಯುತ್ತರ ಹೀಗಿದೆ —

**ಸಂಪ್ರದಾಯ ಎನ್ನುವದು ಶಾಸ್ತ್ರದ ವಚನಗಳಿಗೆ ವಿರುದ್ಧವಾಗಿರಬಾರದು.**

ಉಡುಪಿಯ ಪ್ರಾಂತದಲ್ಲಿ **ಋಗ್ವೇದಾಯ ಸ್ವಾಹಾ ಯಜುರ್ವೇದಾಯ ಸ್ವಾಹಾ** ಎಂದು ಆಚಮನ ಮಾಡುತ್ತಾರೆ. ನಾವು **ಕೇಶವಾಯ ಸ್ವಾಹಾ** ಎಂದು ಆಚಮನ ಮಾಡುತ್ತೇವೆ. ಎರಡೂ ಸಂಪ್ರದಾಯಗಳಿಗೂ ವಾಕ್ಯಗಳ ಪ್ರಮಾಣವಿದೆ. ಎರಡರಿಂದಲೂ ಉಂಟಾಗುವ ಫಲಗಳು ಬೇರೆಬೇರೆ ರೀತಿಯಾಗಿವೆ. ಹೀಗಾಗಿ ಎರಡೂ ಸಂಪ್ರದಾಯಗಳೂ ಮಾನ್ಯವೇ. ಅವಶ್ಯವಾಗಿ ಅವರವರಿಗೆ ಆಚರಣೀಯವೇ. ಸಂಶಯವಿಲ್ಲ.

ಹೀಗೆ ಸಂಪ್ರದಾಯಭೇದವನ್ನು ತೋರಬೇಕಾದರೆ ಪ್ರಮಾಣವನ್ನು ತೋರಬೇಕು. ಧರ್ಮಶಾಸ್ತ್ರಗಳಲ್ಲಿ

ಹೀಗೆ ಪ್ರಮಾಣವನ್ನು ತೋರಿಸಿಯೇ ಸಂಪ್ರದಾಯಭೇದವನ್ನು ಸಮರ್ಥಿಸುತ್ತಾರೆ ಎನ್ನುವದನ್ನು ಮರೆಯಬಾರದು.

ಸಂಪ್ರದಾಯ ಶಾಸ್ತ್ರವಿರುದ್ಧವಾಗಿರಬಾರದು. ಶಾಸ್ತ್ರಸಮ್ಮತವಾಗಿರಬೇಕು. ಪಂಡಿತಾಚಾರ್ಯರ ವಾಕ್ಯ ದಶಮೀವೇಧಕ್ಕೇ ಸಂಬಂಧಿಸಿದ್ದು, ಅತಿರಿಕ್ತ ಏಕಾದಶಿಗಾಗಲೀ, ಶ್ರವಣೋಪವಾಸಕ್ಕಾಗಲೀ, ಕೃಷ್ಣಾಷ್ಟಮೀ, ವಿಷ್ಣುಪಂಚಕಕ್ಕಾಗಲೀ ಸರ್ವಥಾ ಸಂಬಂಧಿಸಿದ್ದಲ್ಲ. ಹೀಗಾಗಿ ಈ ಸಂಪ್ರದಾಯ ಪಂಡಿತಾಚಾರ್ಯರ ನಿರ್ಣಯಕ್ಕೆ ವಿರುದ್ದವಾಗಿದೆ.

ಇನ್ನು ಎರಡನೆಯದು, ಶ್ರೀ ಸ್ಮೃತಿಮುಕ್ತಾವಲೀ ಕೃಷ್ಣಾಚಾರ್ಯರು ತಮ್ಮ ಕೃತಿಗಳಲ್ಲಿ ಅವರ ಕಾಲಕ್ಕೆ ಏಕಾದಶಿಯ ಕುರಿತು ಇದ್ದ ಎಲ್ಲ ಮತಭೇದಗಳನ್ನು ತಪ್ಪದೇ ಉಲ್ಲೇಖಿಸಿದ್ದಾರೆ. ಅತಿರಿಕ್ತ ಏಕಾದಶಿಯ ವಿಷಯದಲ್ಲಿ ಶ್ರೀ ರಾಮಚಂದ್ರತೀರ್ಥ ಶ್ರೀಪಾದಂಗಳವರ ಶಿಷ್ಯರೊಬ್ಬರ ಅಭಿಪ್ರಾಯವನ್ನೂ ಸಹ ಉಲ್ಲೇಖಿಸಿ ಅತಿರಿಕ್ತ ಏಕಾದಶಿಯನ್ನು ಆರ್ಯಮಾನದಿಂದಲೇ ನಿರ್ಣಯಿಸಬೇಕು, ಸೂರ್ಯಸಿದ್ಧಾಂತದಿಂದಲ್ಲ

ಎಂದು ಕಟುವಾದ ಭಾಷೆಯಲ್ಲಿಯೇ ಹೇಳಿದ್ದಾರೆ. ಈ ಲಿಪ್ತಿಗಳ ವಿಷಯವನ್ನು ಉಲ್ಲೇಖಿಸಿಯೂ ಇಲ್ಲ. ಅನುಮೋದಿಸಿಯೂ ಇಲ್ಲ. ಖಂಡಿಸಿಯೂ ಇಲ್ಲ.

**ಹೀಗಾಗಿ ಅತಿರಿಕ್ತ ಏಕಾದಶಿಯಲ್ಲಿ ಲಿಪ್ತಿಗಳನ್ನು ಸೇರಿಸುವದು ಇತ್ತೀಚಿನವರ ತಪ್ಪು ಗ್ರಹಿಕೆಯಿಂದ ಉಂಟಾಗಿರುವ ಸಂಭವನೀಯತೆಯೇ ಹೆಚ್ಚು. ಪ್ರಾಚೀನರು ಹೇಳಿರುವ ಸಾಧ್ಯತೆಯೇ ಇಲ್ಲ.**

ಯಾರೇ ಹೇಳಿದ್ದರೂ ಶ್ರೀ ಪಂಡಿತಾಚಾರ್ಯರ ನಿರ್ಣಯದ ವಿರುದ್ಧವಾಗಿದ್ದಲ್ಲಿ ಅದು ಸಿಂಧುವಾಗಲು ಸಾಧ್ಯವಿಲ್ಲ.

ರಘುವರ್ಯರು, ರಘೂತ್ತಮರು, ವಿದ್ಯಾಧೀಶರು ಬರೆದಿದ್ದಾರೆ ಎನ್ನಲಾದ ಏಕಾದಶೀನಿರ್ಣಯಗಳ ಕೃತಿಗಳು ಪ್ರಕಟಗೊಂಡಲ್ಲಿ ಈ ವಿಷಯ ಸ್ಪಷ್ಟವಾಗುತ್ತದೆ. ಸಂಬಂಧಪಟ್ಟವರು ಆ ಕೃತಿಗಳನ್ನು ಪ್ರಕಟಿಸಿ ಸಂಶೋಧನೆಗೆ ಅನುವು ನೀಡಬೇಕು.

## ನಿರ್ಣಯ

23ನೆಯ ತಾರೀಕು ಶುಕ್ರವಾರ ದಶಮೀ ಆಚರಣೆ. ರಾತ್ರಿ ಹರಿವಾಸರವಿಲ್ಲ.

24ನೆಯ ತಾರೀಕು ಶನಿವಾರ ಏಕಾದಶೀ ಆಚರಣೆ.

25ನೆಯ ತಾರೀಕು ಭಾನುವಾರ ದ್ವಾದಶೀ ಆಚರಣೆ. 10:15 ರ ವರೆಗೆ ಹರಿವಾಸರ ಇರುವದರಿಂದ ಆ ನಂತರ ನೈವೇದ್ಯ, ಹಸ್ತೋದಕ, ಪಾರಣೆಯನ್ನು ಮಾಡಬೇಕು.

— ವಿಷ್ಣುದಾಸ ನಾಗೇಂದ್ರಾಚಾರ್ಯ

**ಸ್ಪಷ್ಟ ಸೂಚನೆ — ಬೇನಾಮಿ ಲೇಖನಗಳಿಗೆ ನಾನು ಉತ್ತರ ನೀಡುವದಿಲ್ಲ ಎನ್ನುವದು ಎಲ್ಲರಿಗೂ ತಿಳಿದಿರುವ ವಿಷಯ. ಈ ಲೇಖನಕ್ಕೆ ಉತ್ತರ ನೀಡ ಬಯಸುವವರು ತಮ್ಮ ಹೆಸರನ್ನು ಪ್ರಕಟಿಸಬೇಕು. ಕತ್ತಲಲ್ಲಿ ಕಲ್ಲು ಹೊಡೆಯುವ ಕೆಲಸವನ್ನು ನಿಜವಾದ ವಿದ್ವಾಂಸರು ಮಾಡುವದಿಲ್ಲ.**

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491